# ಇಷ್ಟೋಪದೇಶ



ಪಂಡಿತರತ್ನ

## ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್

ಜನ್ಮ ಶತಾಬ್ದಿ 1888-1988



ಜನ್ಮ ಶತಾಬ್ದಿ ಪ್ರಕಟಣೆ – ೧೪

ಶ್ರೀಮತ್ಪೂಜ್ಯಪಾದಾಚಾರ್ಯವಿರಚಿತ

# ಇಷ್ಟೋಪದೇಶ

ಲೇಖಕರು :

ಎರ್ತೂರು ಶಾಂತಿರಾಜ ಶಾಸ್ತ್ರಿ

ಪ್ರಕಾಶನ :

ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿ ಟ್ರಸ್ಟ್

ಜನ್ಮ ಶತಾಬ್ದಿ ೧೮೮೮–೧೯೮೮

# ಆಶೀರ್ವಚನ

ಆತ್ಮನು ಹಿಂಸೆಯೇ ಮೊದಲಾದ ಅಶುಭ ವಿಷಯಗಳಲ್ಲಿ ತೊಡಗಿದ್ದರೆ ಪಾಪಕರ್ಮ ಬಂಧವಾಗುತ್ತದೆ. ಇದೇ ಆತ್ಮನು ಯಾವಾಗಲೂ ಶುಭ ವಿಷಯ, ಶುಭಭಾವನೆಯಲ್ಲಿ ಮಗ್ನವಾಗಿದ್ದರೆ ಪುಣ್ಯಕರ್ಮ ಬಂಧವಾಗುವುದು ಸಹಜವಾಗಿದೆ. ಪುಣ್ಯಕರ್ಮ ಬಂಧದಿಂದ ಮೋಕ್ಷ-ಸುಖವು ಪ್ರಾಪ್ತವಾಗುವಂತೆ ಅಶುಭಕರ್ಮ (ಪಾಪ) ಬಂಧದಿಂದ ಇಹಪರಗಳಲ್ಲಿ ದುಃಖವುಂಟಾಗುತ್ತದೆ. ಪುಣ್ಯಕರ್ಮ ಅಥವಾ ಪಾಪಕರ್ಮ ಬಂಧವು ಅವರವರ ಚಿಂತನೆಯ–ಭಾವನೆಯ ಪರಿಣಾಮವೇ ಆಗಿದ್ದು ನಮಗೆ ಯಾವ ಬಂಧವಾಗಬೇಕು, ಯಾವಫಲಪ್ರಾಪ್ತಿಯಾಗಬೇಕೆಂಬ ತಿಳಿವು ಮೂಡಬೇಕಾದರೆ ಪೂರ್ವಾಚಾರ್ಯರುಗಳು ಉಪದೇಶಿಸಿದ ವಾಕ್ಯಗಳು ನಮಗೆ ಸದಾ ನೆನಪಾಗುತ್ತಿರಬೇಕು. ಆತ್ಮನ ಉದ್ಧಾರವನ್ನೇ ಗುರಿಯಾಗಿರಿಸಿಕೊಂಡ ಆಚಾರ್ಯವಾಣಿಯಲ್ಲಿ ಪ್ರತಿಯೊಂದು ಜೀವಿಯ ಕಲ್ಯಾಣಕ್ಕೆ ಸೂಕ್ತ ಮಾರ್ಗದರ್ಶನವು ದೊರೆಯುತ್ತದೆ. ಆಚಾರ್ಯರ ಉಪದೇಶಗಳು ಇದರಿಂದಲೇ ಮಾನವ ಜೀವಿಗೆ ಇಷ್ಟವಾಗುತ್ತದೆ, ಇಷ್ಟವಾಗಬೇಕು.

ಆಚಾರ್ಯ ಶ್ರೀ ಪೂಜ್ಯಪಾದರಿಗೆ ಜೈನಧರ್ಮಿಯರಲ್ಲಿ ಉನ್ನತ ಸ್ಥಾನವಿದೆ, ಅನನ್ಯ ಭಕ್ತಿ, ಶ್ರದ್ಧೆಯಿದೆ. ಗಣಿಯಲ್ಲಿರುವ ಚಿನ್ನವು ಕಲ್ಲು ಮಣ್ಣುಗಳಿಂದ ಆವೃತವಾಗಿದ್ದು ಅಶುದ್ಧಾವಸ್ಥೆಯಲ್ಲಿರುತ್ತದೆ. ಬಂಗಾರವನ್ನು ಆವರಿಸಿರುವ ಅಶುದ್ಧ ವಸ್ತುಗಳನ್ನು ದೂರ ಮಾಡಿದಾಗ ಶುದ್ಧ ಬಂಗಾರವು ಗೋಚರವಾಗುವಂತೆ ಅಶುದ್ಧ ಭಾವನೆಗಳಿಂದ ಆವೃತವಾದ ಆತ್ಮನ ನಿಜಸ್ವರೂಪವು ಗೋಚರವಾಗಬೇಕಾದರೆ ಎಲ್ಲ ಅಶುದ್ಧ ಭಾವನೆಗಳೂ ದೂರವಾದರೆ ಮಾತ್ರ ಸಾಧ್ಯ. ಇಷ್ಟೋಪದೇಶದಂತಹ ಕೃತಿಗಳಿಂದ ಸಮಾಜಕ್ಕೆ ತುಂಬಾ ಉಪಕಾರವಾಗುತ್ತದೆ. ಎಲ್ಲರಿಗೂ ತಿಳಿಯುವಂತೆ ಅರ್ಥವಿವರಣಗಳನ್ನು ಎರ್ತೂರು ಶ್ರೀ ಶಾಂತಿರಾಜಶಾಸ್ತ್ರಿಗಳವರು ಸರಳವಾಗಿ ಹೇಳಿದ್ದು ಸಕಲರೂ ಓದಿ ಮನನ ಮಾಡಲು ಸಾಧ್ಯವಾಗುವಂತಿದೆ.

ಇಂತಹ ಕಾರ್ಯಗಳು ಸದಾ ಆಗುತ್ತಿರಬೇಕು. ಪೂರ್ವ ಪರಂಪರೆ ಮುಂದುವರಿಯಬೇಕು. ಈ ಗ್ರಂಥದ ಪುನರ್‌ಮುದ್ರಣಕ್ಕೆ ನೆರವಾದ ಮೈಸೂರಿನ ಧರ್ಮಬಂಧು ಶ್ರೀ ಕೆ. ರಘುಚಂದ್ರ ಅಜ್ರಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಮರುದೇವಿ ಇವರುಗಳ ಕಾರ್ಯ ಸ್ತುತ್ಯಾರ್ಹ ಹಾಗೂ ಅನುಕರಣೀಯ. ಇವರೆಲ್ಲರಿಗೂ ಸನ್ಮಂಗಲವಾಗಲೆಂದು ಶುಭ ಹಾರೈಸುತ್ತೇವೆ.

ಕರ್ಮಯೋಗಿ

೧೩–೧೦–೧೯೮೮ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಶ್ರವಣಬೆಳಗೊಳ

## ಸಮರ್ಪಣೆ

ದಕ್ಷಿಣ ಕನ್ನಡಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶ್ರೀ ಕೆ. ಸಿದ್ದಪ್ಪ ಶೆಟ್ಟರ ಸುಪುತ್ರರೂ, ಸದ್ಧರ್ಮಬಂಧುಗಳೂ, ಮೈಸೂರಿನ ನಿವಾಸಿಗಳೂ ಆದ ಸನ್ಮಾನ್ಯ ಶ್ರೀ ಕೆ. ರಘುಚಂದ್ರ ಅಜ್ರಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಮರುದೇವಿ (ವೈನಾಡಿನ ಸ್ವರ್ಗೀಯ ಶ್ರೀ ಎಂ. ಎಸ್. ಪದ್ಮಯ್ಯನವರ ಸುಪುತ್ರಿ) ಇವರುಗಳು, ಅವರ ವಿವಾಹದ ಬೆಳ್ಳಿಹಬ್ಬ ಸಂವತ್ಸರದ ಸವಿನೆನಪಿಗಾಗಿ ಈ

## ಇಷ್ಟೋಪದೇಶ

ಗ್ರಂಥದ ದ್ವಿತೀಯ ಮುದ್ರಣವನ್ನು ಮಾಡಿಸಿ ವೈನಾಡಿನ ಸ್ವರ್ಗೀಯ ಶ್ರೀ ಎಂ. ಎಸ್. ಪದ್ಮಯ್ಯನವರ ದಿವ್ಯಸ್ಮರಣೆಗಾಗಿ ಸಮರ್ಪಣೆ ಮಾಡಿರುತ್ತಾರೆ.

ಈ ದಂಪತಿಗಳಿಗೆ **ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್** ಆಭಾರಿಯಾಗಿದೆ.

# ಪ್ರಕಾಶಕರ ವಿಜ್ಞಾಪನೆ

ಈ ಗ್ರಂಥವನ್ನು ೧೯೩೮ರಲ್ಲಿ ಧರ್ಮಾತ್ಮರಾದ ದಕ್ಷಿಣಕನ್ನಡಜಿಲ್ಲೆಯ ಪಣಪಿಲ ಅರಮನೆಯ ಶ್ರೀಮಾನ್ ಶ್ರೀವರ್ಮಶೆಟ್ಟರೂ ಅವರ ಧರ್ಮಪತ್ನಿ ಶ್ರೀಮತಿ ದೇಜಮ್ಮನವರೂ ಮುದ್ರಣಮಾಡಿಸಿ ಶಾಸ್ತ್ರದಾನಕ್ಕಾಗಿ ಪ್ರಕಾಶಪಡಿಸಿದ್ದರು.

ಈಗ ಈ ಗ್ರಂಥದ ದ್ವಿತೀಯ ಮುದ್ರಣಕ್ಕೆ ಧರ್ಮಾಭಿಮಾನಿಗಳಾದ ಮೈಸೂರಿನ ಶ್ರೀ ಕೆ. ರಘುಚಂದ್ರ ಅಜ್ರಿ ರವರು ಮುಂದಾಗಿರುವುದು ಶ್ಲಾಘನೀಯ ಹಾಗೂ ಅನುಕರಣೀಯ. ಈ ಮುದ್ರಣದಲ್ಲಿ ಸಾಧ್ಯವಾದಷ್ಟು ತಪ್ಪು-ಒಪ್ಪುಗಳನ್ನು ಗಮನಿಸಿ ಸರಿಪಡಿಸಿ ಮೂಲ ಕೃತಿಗೆ ಯಾವ ರೀತಿಯ ಅಪಚಾರವೂ ಆಗದಂತೆ ಎ. ಶಾಂತಿರಾಜಶಾಸ್ತ್ರಿಗಳವರ ಮೂಲ ಮುನ್ನುಡಿಯೊಡನೆ ಹೊರತರಲಾಗಿದೆ.

ಈ ಮುದ್ರಣಕ್ಕೆ ಶ್ರೀಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು "ಶುಭಾಶೀರ್ವಚನ" ದಯಪಾಲಿಸಿರುತ್ತಾರೆ. ಅವರಿಗೆ ಈ ಟ್ರಸ್ಟ್ ಭಕ್ತಿಪೂರ್ವಕ ವಂದನೆಗಳನ್ನು ಸಮರ್ಪಿಸುತ್ತದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ತಪ್ಪುಗಳಿಗೆ ಅವಕಾಶವಾಗದಂತೆ ಮುದ್ರಿಸಿಕೊಟ್ಟ ಬೆಂಗಳೂರಿನ ಶ್ರೀ ಭಗವತಿ ಪ್ರಿಂಟರ್ಸ್‌ನ ಮಾಲಿಕರಿಗೂ, ಈ ಗ್ರಂಥಕ್ಕೆ ಅಂದವಾದ ರಕ್ಷಾಕವಚ ವಿನ್ಯಾಸವನ್ನು ಶ್ರದ್ಧೆಯಿಂದ ರಚಿಸಿಕೊಟ್ಟ ಬೆಂಗಳೂರಿನ ಶ್ರೀ ಆರ್. ಎಸ್. ಪದ್ಮರಾಜ್ ರವರಿಗೂ ಮತ್ತು ರಕ್ಷಾಕವಚವನ್ನು ಅಂದವಾಗಿ ಮುದ್ರಿಸಿಕೊಟ್ಟ ಬಿ.ಬಿ.ಡಿ. ಪವರ್ ಪ್ರೆಸ್, ಬೆಂಗಳೂರು ಇವರೆಲ್ಲರನ್ನೂ ಟ್ರಸ್ಟ್ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಬೆಂಗಳೂರು,
ಅಕ್ಟೋಬರ್ ೧೩, ೧೯೮೮

ಪಂಡಿತರತ್ನ
ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್.

# ಮುನ್ನುಡಿ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳಲ್ಲಿ ಮೊದಲನೆಯದಾದ ಧರ್ಮಪುರುಷಾರ್ಥವು "ನ ತಂ ವಿನಾ ಯದ್ಭವತೋರ್ಥಕಾಮೌ" ಎನ್ನುವಂತೆ ಅರ್ಥಕಾಮಪುರುಷಾರ್ಥಗಳಿಗೆ ಸಾಧನವಾಗಿರುವುದಲ್ಲದೆ ಪ್ರತಿಯೊಬ್ಬ ಜೀವಾತ್ಮನ ಪರಮಧ್ಯೇಯವಾಗಿರುವ ಮೋಕ್ಷ ಪುರುಷಾರ್ಥದ ಪ್ರಾಪ್ತಿಗೂ ಸಾಧನವಾಗಿರುವುದು. ಆದುದರಿಂದ ಪ್ರತಿಯೊಬ್ಬ ಆತ್ಮಹಿತಕಾಂಕ್ಷಿಯೂ ಧರ್ಮಪುರುಷಾರ್ಥಕ್ಕೆ ಬಾಧೆಯಿಲ್ಲದಂತೆ ಅರ್ಥಕಾಮಪುರುಷಾರ್ಥಗಳನ್ನು ಅನುಭವಿಸುತ್ತ ಮೋಕ್ಷಪುರುಷಾರ್ಥದಲ್ಲಿ ಗುರಿಯನ್ನಿಟ್ಟು ಸಕಲಸಾಧನಗಳೊದಗಿದಾಗ ಅದನ್ನು ದೊರಕಿಸುವುದಕ್ಕೆ ಪ್ರಯತ್ನಪರನಾಗಬೇಕೆಂದು ಧರ್ಮಶಾಸ್ತ್ರವು ಹೇಳುತ್ತದೆ.

ಈ ಚತುರ್ವಿಧಪುರುಷಾರ್ಥಗಳನ್ನು ಬೋಧಿಸುವ ಗ್ರಂಥಗಳಿಗೆ ಯಥಾಕ್ರಮವಾಗಿ ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಮೋಕ್ಷಶಾಸ್ತ್ರ ಅಥವಾ ಅಧ್ಯಾತ್ಮಶಾಸ್ತ್ರಗಳೆಂದು ಹೆಸರು. ಸಕಲಶಾಸ್ತ್ರಗಳಲ್ಲಿ ಮುಖ್ಯಸಾರವಾದುದು ಅಧ್ಯಾತ್ಮಶಾಸ್ತ್ರ. ಸಕಲವಿದ್ಯೆಗಳಲ್ಲಿ ಮುಖ್ಯಸಾರವಾದುದು ಅಧ್ಯಾತ್ಮವಿದ್ಯೆ-ವೇದಾಂತವಿದ್ಯೆ. ಇಂತಹ ವಿಷಯವನ್ನು ಬೋಧಿಸುವ ಗ್ರಂಥಗಳಲ್ಲಿ ಈ "ಇಷ್ಟೋಪದೇಶ" ಗ್ರಂಥವೂ ಒಂದಾಗಿದೆ. ಈ ಗ್ರಂಥವನ್ನು ರಚಿಸಿದವರು ಜೈನಸಮಾಜಕ್ಕೆ ಪರಮಪೂಜ್ಯರಾದ ಪೂಜ್ಯಪಾದಾಚಾರ್ಯರು. ಆ ಮಹಾತ್ಮರು ತರ್ಕ ವ್ಯಾಕರಣ ಆಗಮ ವೈದ್ಯವಿದ್ಯೆಗಳಲ್ಲಿ ಅಸಾಧಾರಣವಿದ್ವಾಂಸರಾಗಿದ್ದರು. ಅವರು ಸಂಸ್ಕೃತದಲ್ಲಿ ಜೈನೇಂದ್ರವ್ಯಾಕರಣವನ್ನೂ ತತ್ವಾರ್ಥಸೂತ್ರಗ್ರಂಥಕ್ಕೆ "ಸರ್ವಾರ್ಥಸಿದ್ಧಿ"ಯೆಂಬ ಸಂಸ್ಕೃತವ್ಯಾಖ್ಯಾನವನ್ನೂ ಸಂಸ್ಕೃತದಶಭಕ್ತಿಗಳನ್ನೂ ಯಂತ್ರಮಂತ್ರಶಾಸ್ತ್ರಗ್ರಂಥಗಳನ್ನೂ ಲೋಕೋಪಕಾರಾರ್ಥವಾಗಿ "ಕಲ್ಯಾಣಕಾರಕ"ವೆಂಬ ಅದ್ವಿತೀಯವಾದ ವೈದ್ಯಗ್ರಂಥವನ್ನೂ ಸಮಾಧಿಶತಕ ಮತ್ತು ಇಷ್ಟೋಪದೇಶವೆಂಬ ಅಧ್ಯಾತ್ಮವಿಷಯಕ ಗ್ರಂಥಗಳನ್ನೂ ಬರೆದು ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿದ್ದಾರೆ. ಅವರಿಗೆ ಮೊದಲು ದೇವನಂದಿ

ಯೆಂದೂ ಜಿನೇಂದ್ರಬುದ್ಧಿಯೆಂದೂ ಹೆಸರುಗಳಿದ್ದುವು. ಅವರ ತಪಃ ಪ್ರಭಾವವನ್ನು ನೋಡಿ ವನದೇವತೆಗಳು ಅವರ ಪಾದಗಳನ್ನು ಪೂಜಿಸಿದುದ ರಿಂದ ಅವರಿಗೆ ಪೂಜ್ಯಪಾದರೆಂದು ಹೆಸರು ಬಂದಿತ್ತು. ಅವರು ಗಗನ ಗಮನಸಾಮರ್ಥ್ಯವುಳ್ಳವರೂ ವಿದೇಹಕ್ಷೇತ್ರಕ್ಕೆ ಹೋಗಿ ಸಾಕ್ಷಾಜ್ಜಿನದರ್ಶನ ವನ್ನು ಮಾಡಿದವರೂ ತಮ್ಮ ಪಾದಜಲಸ್ಪರ್ಶದಿಂದ ಕಬ್ಬಿಣವನ್ನು ಬಂಗಾರ ವನ್ನಾಗಿ ಮಾಡುವ ಸಾಮರ್ಥ್ಯವುಳ್ಳವರೂ ಆಗಿದ್ದರು. ಈ ವಿಷಯವು ಶ್ರವಣಬೆಳ್ಗೊಳದ ೬೪, ೨೫೪, ೨೫೮ ನೆಯ ಶಾಸನಗಳಿಂದ ಗೊತ್ತಾಗುವುದು. ಚಾವುಂಡರಾಯನು ಅವರನ್ನು "ಗಗನಗಮನಸಾಮರ್ಥ್ಯರ್" "ತಾರ್ಕಿಕತಿಳಕರ್" ಎಂದೂ ವೃತ್ತವಿಲಾಸನು "ವಿಶ್ವವಿದ್ಯಾಭರಣಂ" "ದೇವಾಂಗನಾರಾಧಿತಪದಕಮಳಂ" ಎಂದೂ ಪಾರ್ಶ್ವಪಂಡಿತನು "ಸಕಲೋರ್ವೀನುತಪೂಜ್ಯಪಾದಮುನಿಪಂ" "ಕಾರುಣ್ಯದುಗ್ಧಾರ್ಣವಂ" ಎಂದೂ ಹೊಗಳಿದ್ದಾರೆ. ಅವರು ಶಕವರ್ಷ ೪೦೦ರಲ್ಲಿ-ಈಗ್ಗೆ ೧೪೮೫ ವರ್ಷಗಳ ಹಿಂದೆ ಕೊಳ್ಳೆಗಾಲದಲ್ಲಿ ಜನಿಸಿದರೆಂದು ರಾಜಾವಲೀ ಕಥೆಯಿಂದ ಗೊತ್ತಾಗುವುದು. ಆ ಮಹನೀಯರು ಈ ಗ್ರಂಥದ ಕರ್ತರೆಂದ ಮೇಲೆ ಇದರ ಮಹತ್ವವನ್ನು ಹೆಚ್ಚಾಗಿ ವರ್ಣಿಸಬೇಕಾದುದಿಲ್ಲ.

ದಕ್ಷಿಣ ಕನ್ನಡಜಿಲ್ಲೆಯ ಪಣಪಿಲ ಅರಮನೆಯ ಶ್ರೀಮಾನ್ ಶ್ರೀ ವರ್ಮಶೆಟ್ಟರೂ ಅವರ ಧರ್ಮಪತ್ನಿ ಶ್ರೀಮತೀ ದೇಜಮ್ಮನವರೂ ಮೂಡ ಬಿದಿರೆಯ ಸಿದ್ಧಾಂತ ಬಸ್ತಿಯಲ್ಲಿ ಆಶ್ವಯುಜ ಶುದ್ಧ ೮-ಜೀವದಯಾಷ್ಟಮಿಯ ದಿವಸ ಎಂದಿನಂತೆ ಶಾಸ್ತ್ರದಾನವನ್ನು ಮಾಡುವುದಕ್ಕಾಗಿ ಈ ಸಲ ಈ ಅಧ್ಯಾತ್ಮಗ್ರಂಥವನ್ನು ಅರಿಸಿದ್ದಾರೆ. ಆ ಧರ್ಮಾತ್ಮರುಗಳ ಧಾರ್ಮಿಕ ಪ್ರೇಮವೂ ಔದಾರ್ಯವೂ ಸ್ತುತ್ಯವಾಗಿವೆ.

ಲೇಖಕ

ವೀರ ನಿರ್ವಾಣಶಕ ೨೪೮೪ ಬಹುಧಾನ್ಯನಾಮಸಂವತ್ಸರದ ಅಶ್ವಯುಜ ಶುಕ್ಲಾಷ್ಟಮಿ

॥ ಓಂ ನಮಃ ಸಿದ್ಧೇಭ್ಯಃ ॥

## ಶ್ರೀ ಮತ್ಪೂಜ್ಯಪಾದಾಚಾರ್ಯವಿರಚಿತ

# ಇಷ್ಟೋಪದೇಶ

ಯಸ್ಯ ಸ್ವಯಂ ಸ್ವಭಾವಾಪ್ತಿರಭಾವೇ ಕೃತ್ಸ್ನಕರ್ಮಣಃ ॥
ತಸ್ಮೈ ಸಂಜ್ಞಾನರೂಪಾಯ ನಮೋಽಸ್ತು ಪರಮಾತ್ಮನೇ ॥೧॥

ಭಾವಾರ್ಥ:- ಯಾವನಿಗೆ ಸಕಲಕರ್ಮಗಳು ದೂರವಾದ ಮೇಲೆ ತಾನಾಗಿ ಸ್ವಭಾವದ ಪ್ರಾಪ್ತಿಯಾಯ್ತೋ ಉತ್ತಮಜ್ಞಾನರೂಪನಾದ ಅಂತಹ ಪರಮಾತ್ಮನಿಗೆ ನಮಸ್ಕಾರವಿರಲಿ.

ವಿವರಣ:- ಲೋಕದಲ್ಲಿ ಅನಂತಾನಂತಾತ್ಮರಿದ್ದಾರೆ. ಅವರಲ್ಲಿ ಸಂಸಾರ್ಯಾತ್ಮರೆಂದೂ ಮುಕ್ತಾತ್ಮರೆಂದೂ ಎರಡು ಪ್ರಕಾರವಾದ ಆತ್ಮರಿದ್ದಾರೆ. ಸಂಸಾರ್ಯಾತ್ಮರಿಗೆ ಬದ್ಧಾತ್ಮರೆಂದೂ ಜೀವಾತ್ಮರೆಂದೂ ಮುಕ್ತಾತ್ಮರಿಗೆ ಪರಮಾತ್ಮರೆಂದೂ ಬೇರೆ ಹೆಸರುಗಳೂ ಇರುತ್ತವೆ. ಕರ್ಮಪರವಶತೆಯಿಂದ ನರಕ ತಿರ್ಯಙ್ಮರ್ತ್ಯ ದೇವಗತಿಗಳಲ್ಲಿ ತಿರುಗುತ್ತಿರುವ ಆತ್ಮರುಗಳಿಗೆ ಸಂಸಾರ್ಯಾತ್ಮರೆಂದೂ ಬದ್ಧಾತ್ಮರೆಂದೂ ಜೀವಾತ್ಮರೆಂದೂ ಹೆಸರುಗಳಿರುತ್ತವೆ. ಈ ಆತ್ಮರುಗಳನ್ನು ಬಂಧಿಸಿರುವ ಕರ್ಮಗಳು ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯ, ವೇದನೀಯ, ಆಯುಷ್ಯ, ನಾಮ, ಗೋತ್ರಗಳೆಂದು ಎಂಟು ಪ್ರಕಾರವಾಗಿರುತ್ತವೆ. ಇವುಗಳಲ್ಲಿ ಮೊದಲನೆಯ ನಾಲ್ಕು ಕರ್ಮಗಳಿಗೆ ಘಾತಿಕರ್ಮಗಳೆಂದೂ ಉಳಿದ ನಾಲ್ಕು ಕರ್ಮಗಳಿಗೆ ಅಘಾತಿಕರ್ಮಗಳೆಂದೂ ಹೆಸರು.

ನೀರಿನ ಸ್ವಾಭಾವಿಕವಾದ ಶೈತ್ಯಗುಣವು ಬೆಂಕಿಯ ಸಂಪರ್ಕದಿಂದ ಮರೆಯಾಗಿ ಅದರ ಔಷ್ಣ್ಯಗುಣವು ನೀರಿನಲ್ಲಿ ಅಭಿವ್ಯಕ್ತವಾಗುವಂತೆ ಆತ್ಮನ ಸ್ವಾಭಾವಿಕವಾದ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತಶಕ್ತಿ, ಅವ್ಯಾಬಾಧತ್ವ, ಸೂಕ್ಷ್ಮತ್ವ, ಅವಗಹನತ್ವ, ಅಗುರುಲಘುತ್ವಗಳೆಂಬ ಗುಣಗಳು ಮೇಲೆ ಹೇಳಲ್ಪಟ್ಟ ಎಂಟು ಪ್ರಕಾರವಾದ ಜಡಕರ್ಮಗಳ ಸಂಬಂಧದಿಂದ ಯಥಾಕ್ರಮವಾಗಿ ಮರೆಯಾಗಿ ಅವುಗಳ ಅಜ್ಞಾನಾದಿ ಗುಣಗಳು ಆತ್ಮನಲ್ಲಿ ಅಭಿವ್ಯಕ್ತವಾಗುತ್ತವೆ. ಬೆಂಕಿಯ ಸಂಬಂಧವು ದೂರವಾದ ಬಳಿಕ ನೀರಿನ ಆ ಸ್ವಾಭಾವಿಕವಾದ ಶೈತ್ಯಗುಣವು ಅಭಿವ್ಯಕ್ತವಾಗುವಂತೆ ಪ್ರವಾಹರೂಪವಾದ ಅನಾದಿಕರ್ಮದಿಂದ ಬದ್ಧನಾದ ಆತ್ಮನು ಸಕಲ ಕರ್ಮಗಳನ್ನು ಸಮ್ಯಗ್ದರ್ಶನ ಜ್ಞಾನ ಚಾರಿತ್ರಪೂರ್ವಕವಾದ ತಪಸ್ಸಿನಿಂದಲೂ ಧ್ಯಾನದಿಂದಲೂ ನಿಃಶೇಷವಾಗಿ ತಾನು ನಾಶಮಾಡಿದರೆ ಆಗ ಕರ್ಮಜನ್ಯವಾದ ಅಜ್ಞಾನಾದಿವಿಭಾವಗುಣಗಳು ದೂರವಾಗಿ ಸ್ವಾಭಾವಿಕವಾದ ಆ ಅನಂತಜ್ಞಾನಾದಿಗುಣಗಳು ಅಭಿವ್ಯಕ್ತವಾಗುತ್ತವೆ. ಆಗ ಆತ್ಮನು ಪರಮಾತ್ಮನಾಗಿ ಪರಿಣಮಿಸುತ್ತಾನೆ. ಅಂತಹ ಉತ್ತಮಜ್ಞಾನರೂಪನಾದ ಪರಿಶುದ್ಧಪರಮಾತ್ಮನಿಗೆ ನಮಸ್ಕಾರವನ್ನು ಮಾಡುತ್ತೇನೆಂದು ಈ ಗ್ರಂಥದ ಕರ್ತರಾದ ಶ್ರೀ ಪೂಜ್ಯಪಾದಾಚಾರ್ಯರು ಮಂಗಲಾಚರಣವನ್ನು ಮಾಡಿರುತ್ತಾರೆ ॥೧॥

**ಯೋಗ್ಯೋಪಾದಾನಯೋಗೇನ ದೃಷದಃ ಸ್ವರ್ಣತಾ ಮತಾ ।**
**ದ್ರವ್ಯಾದಿಸ್ವಾದಿಸಂಪತ್ತಾವಾತ್ಮನೋಽಪ್ಯಾತ್ಮತಾ ಮತಾ ॥೨॥**

**ಭಾವಾರ್ಥ:**— ಗಣಿಯಿಂದ ತೆಗೆದ ಚಿನ್ನದ ಅದುರು-ಕಲ್ಲು ಯೋಗ್ಯವಾದ ಸಾಧನ–ಸಾಮಗ್ರಿಗಳ ಸಂಬಂಧದಿಂದ ಬಂಗಾರವಾಗುವುದು. ಹಾಗೆ ಆತ್ಮನಿಗೂ ಉತ್ತಮವಾದ ದ್ರವ್ಯ ಕ್ಷೇತ್ರ ಕಾಲ ಭಾವಗಳ ಸಂಬಂಧವು ದೊರೆತರೆ ಆತ್ಮತ್ವವು ಪ್ರಾಪ್ತವಾಗುವುದು.

**ವಿವರಣ:**— ಲೋಕದಲ್ಲಿ ಸುವರ್ಣಪಾಷಾಣ ಅಂಧಪಾಷಾಣಗಳೆಂದು ಎರಡು ವಿಧವಾದ ಕಲ್ಲುಗಳಿರುತ್ತವೆ. ಅವುಗಳಲ್ಲಿ ಅಂಧಪಾಷಾಣವು ಎಂದೂ ಬಂಗಾರವಾಗುವುದಿಲ್ಲ. ಸುವರ್ಣಪಾಷಾಣವಾದರೋ ಯೋಗ್ಯವಾದ



ಯಂತ್ರೋಪಕರಣ ದ್ರಾವಕ ಮೊದಲಾದ ಸಾಧನಗಳ ಸಂಯೋಜನೆಯಿಂದ ಬಂಗಾರವಾಗುವುದು. ಅದರಂತೆ ಲೋಕದಲ್ಲಿ ಭವ್ಯಾತ್ಮರೆಂದೂ ಅಭವ್ಯಾತ್ಮರೆಂದೂ ಎರಡು ವಿಧವಾದ ಆತ್ಮರುಗಳಿರುತ್ತಾರೆ. ಅವರಲ್ಲಿ ಅಭವ್ಯಾತ್ಮರು ಎಂದೂ ಕರ್ಮವಿಮುಕ್ತರಾಗಿ ನಿಜಸ್ವರೂಪವನ್ನು ಹೊಂದುವುದಿಲ್ಲ. ಅವರಲ್ಲಿ ಆ ಯೋಗ್ಯತೆಯೇ ಇಲ್ಲ. ಭವ್ಯಾತ್ಮರಾದರೋ ಉತ್ತಮವಾದ ದ್ರವ್ಯ ಕ್ಷೇತ್ರ ಕಾಲ ಭಾವಗಳ ಸಂಬಂಧದಿಂದ ಕರ್ಮವಿಮುಕ್ತರಾಗಿ ನಿಜಸ್ವರೂಪವನ್ನು ಹೊಂದಬಲ್ಲರು.

ಸುವರ್ಣಪಾಷಾಣದಲ್ಲಿ ಕಲ್ಲಿನ ಅಂಶವೂ ಬಂಗಾರದ ಅಂಶವೂ ಸೇರಿಕೊಂಡಿದೆ. ಆ ಅಂಶಗಳು ಮೊದಲು ಬೇರೆಬೇರೆಯಾಗಿದ್ದು ಆಮೇಲೆ ಸೇರಿಕೊಂಡಿರುವುದಲ್ಲ-ಮೊದಲಿನಿಂದಲೂ ಅವು ಸೇರಿಕೊಂಡೇ ಇರುತ್ತವೆ. ಹಾಗೆಯೇ ಕರ್ಮಬದ್ಧರಾಗಿರುವ ಭವ್ಯಾತ್ಮರೂ ಅವರಲ್ಲಿ ಸೇರಿರುವ ಕರ್ಮವೂ ಮೊದಲು ಬೇರೆಬೇರೆಯಾಗಿದ್ದು ಆಮೇಲೆ ಸೇರಿಕೊಂಡಿರುವುದಲ್ಲ-ಅನಾದಿಕಾಲದಿಂದಲೂ ಸೇರಿಕೊಂಡೇ ಇರುತ್ತವೆ. ವಿಶಿಷ್ಟವಾದ ಸಾಧನಗಳ ಪ್ರಯೋಗದಿಂದ ಸುವರ್ಣಪಾಷಾಣದಲ್ಲಿರುವ ಕಲ್ಲಿನ ಅಂಶವು–ಕಶ್ಮಲವು ದೂರವಾಗಿ ಶುದ್ಧಸುವರ್ಣವು ಪ್ರಕಟವಾಗುವಂತೆ ಉತ್ತಮವಾದ ದ್ರವ್ಯ ಕ್ಷೇತ್ರ ಕಾಲ ಭಾವರೂಪವಾದ ಸಾಧನಗಳು ಅಂದರೆ ತಪಃಕ್ಲೇಶವನ್ನು ಸಹಿಸಬಲ್ಲ ಉತ್ತಮವಾದ ಶರೀರ, ಆರ್ಯಖಂಡ-ಕರ್ಮಭೂಮಿ, ಉತ್ಸರ್ಪಿಣೀಯುಗದ ತೃತೀಯಕಾಲ ಅಥವಾ ಅವಸರ್ಪಿಣೀಯುಗದ ಚತುರ್ಥಕಾಲ, ಸಮ್ಯಕ್ತ್ವಪರಿಣಾಮ ಈ ಸಾಧನಗಳು ದೊರೆತಾಗ ಭವ್ಯಾತ್ಮನು ಪ್ರಯತ್ನಶೀಲನಾದರೆ ಕರ್ಮಕಶ್ಮಲವು ದೂರವಾಗಿ ಪರಮಾತ್ಮ–ಶುದ್ಧಾತ್ಮಸ್ವರೂಪವು ಪ್ರಕಟವಾಗುವುದು. ಹೊಟ್ಟು-ಸಿಪ್ಪೆಯೂ ಅಕ್ಕಿಯೂ ಮೊದಲಿನಿಂದಲೂ ಸೇರಿಕೊಂಡಿರುತ್ತವೆ. ಬತ್ತವನ್ನು ಕುಟ್ಟಿ ಹೊಟ್ಟನ್ನೂ ಅಕ್ಕಿಯನ್ನೂ ಬೇರೆಬೇರೆಯಾಗಿ ಮಾಡಿದ ನಂತರ ಆ ಅಕ್ಕಿಗೆ ಮತ್ತೆ ಹೊಟ್ಟಿನ ಸಂಪರ್ಕವಿಲ್ಲ. ಹಾಗೆಯೇ ಅನಾದಿಕರ್ಮಬದ್ಧನಾದ ಭವ್ಯಾತ್ಮನು ಉತ್ತಮವಾದ ದ್ರವ್ಯ ಕ್ಷೇತ್ರ ಕಾಲ ಭಾವಗಳ ಸಂಬಂಧದಿಂದಲೂ ಪ್ರಯತ್ನದಿಂದಲೂ ಕರ್ಮವಿಮುಕ್ತನಾಗಿ ವಿಶುದ್ಧನಾದ ಬಳಿಕ ಮತ್ತೆ

ಆ ಆತ್ಮನಿಗೆಂದೂ ಕರ್ಮದ ಸಂಬಂಧವಿಲ್ಲ. ಅನಂತಕಾಲ ಶುದ್ಧಚಿದಾನಂದೈಕಸ್ವರೂಪನಾಗಿರುತ್ತಾನೆ ॥೨॥

**ವರಂ ವ್ರತೈಃ ಪದಂ ದೈವಂ ನಾವ್ರತೈರ್ಬತ ನಾರಕಂ॥**
**ಛಾಯಾತಪಸ್ಥಯೋರ್ಭೇದಃ ಪ್ರತಿಪಾಲಯತೋರ್ಮಹಾನ್॥೩॥**

ಭಾವಾರ್ಥ:- ಇಷ್ಟವ್ಯಕ್ತಿಯನ್ನು ಮರದ ನೆರಳಿನಲ್ಲಿದ್ದು ಇದಿರು ನೋಡುತ್ತಿರುವವನಿಗೂ ಬಿಸಿಲಿನಲ್ಲಿದ್ದು ಇದಿರು ನೋಡುತ್ತಿರುವವನಿಗೂ ಬಹಳ ಭೇದವಿದೆ. ಅದರಂತೆ ವ್ರತಗಳಿಂದ ಉತ್ತಮವಾದ ದೈವಪದವಿಯನ್ನು ಪಡೆಯುವವನಿಗೂ ಅವ್ರತಗಳಿಂದ ದುಃಖಕರವಾದ ನಾರಕಪದವಿಯನ್ನು ಪಡೆಯುವವನಿಗೂ ಬಹಳ ಭೇದವಿದೆ.

ವಿವರಣ:- ಮುಕ್ತಿಯನ್ನು ಪಡೆಯತಕ್ಕ ಯೋಗ್ಯತೆಯುಳ್ಳ ಭವ್ಯಾತ್ಮನಿಗೆ ಉತ್ತಮವಾದ ದ್ರವ್ಯ ಕ್ಷೇತ್ರ ಕಾಲ ಭಾವಪೂರ್ವಕವಾದ ಶುದ್ಧೋಪಯೋಗವೂ ಪರಮಸಮಾಧಿ-ಶುಕ್ಲಧ್ಯಾನವೂ ಪ್ರಾಪ್ತವಾದ ಹೊರತು ಮುಕ್ತಿಯು ದೊರೆಯದು. ಆದುದರಿಂದ ಪ್ರತಿಯೊಬ್ಬ ಭವ್ಯಾತ್ಮನೂ ಆ ದ್ರವ್ಯ ಕ್ಷೇತ್ರಾದಿ ಸಾಧನಗಳನ್ನು ಇದಿರುನೋಡುತ್ತಿರಬೇಕಾಗುವುದು. ಹಾಗೆ ಇದಿರು ನೋಡತಕ್ಕ ಭವ್ಯಾತ್ಮರಲ್ಲಿಯೂ ಎರಡು ಬಗೆಯವರಿರುವರು- ಕೆಲವರು ಅಹಿಂಸಾ ಸತ್ಯ ಅಚೌರ್ಯ ಬ್ರಹ್ಮಚರ್ಯ ಅಪರಿಗ್ರಹಗಳೆಂಬ ವ್ರತಗಳನ್ನು ಪಾಲಿಸಿ ದೇವಗತಿಯನ್ನು ಪಡೆದು ಸುಖವನ್ನನುಭವಿಸುತ್ತ ಮುಕ್ತಿಸಾಧನವನ್ನು ಕಾಯುತ್ತಿರಬಹುದು. ಇನ್ನು ಕೆಲವರು ಹಿಂಸಾ ಅಸತ್ಯ ಚೌರ್ಯ ಅಬ್ರಹ್ಮಚರ್ಯ ಪರಿಗ್ರಹಗಳೆಂಬ ಅವ್ರತಗಳನ್ನಾಚರಿಸಿ ನರಕಗತಿಯನ್ನು ಪಡೆದು ದುಃಖವನ್ನನುಭವಿಸುತ್ತ ಕಾಯುತ್ತಿರಬಹುದು. ಹೇಗೆಂದರೆ, ಒಂದು ಇಷ್ಟವ್ಯಕ್ತಿಯ ಬರುವಿಕೆಯನ್ನು ಒಬ್ಬ ಮನುಷ್ಯನು ಮರದ ನೆರಳಿನಲ್ಲಿದ್ದು ಇದಿರುನೋಡುತ್ತಿರಬಹುದು. ಇನ್ನೊಬ್ಬ ಮನುಷ್ಯನು ಬಿಸಿಲಿನಲ್ಲಿದ್ದು ಇದಿರುನೋಡುತ್ತಿರಬಹುದು. ಅವರೀರ್ವರ ಧ್ಯೇಯವು ಒಂದೇ ಆಗಿದ್ದರೂ ಮೊದಲನೆಯವನು ಸುಖಿಯೂ ಎರಡನೆಯವನು ದುಃಖಿಯೂ ಆಗಿದ್ದು ಅದನ್ನು ಇದಿರುನೋಡುತ್ತಿರುವರು. ನೆರಳಿನಲ್ಲಿದ್ದು ಕಾದಿರುವಂತೆ ದೇವಪದವಿಯನ್ನು ಪಡೆದು ಸುಖವನ್ನನು



ಭವಿಸುತ್ತ ಮುಕ್ತಿಸಾಧನವನ್ನು ಇದಿರುನೋಡುತ್ತಿರುವುದು ಶ್ರೇಷ್ಠ. ಬಿಸಿಲಿನಲ್ಲಿದ್ದು ಕಾದಿರುವಂತೆ ನರಕದುಃಖವನ್ನನುಭವಿಸುತ್ತ ಮುಕ್ತಿಸಾಧನವನ್ನು ಇದಿರುನೋಡುತ್ತಿರುವುದು ಶ್ರೇಷ್ಠವಲ್ಲ.

ಆತ್ಮನ ಮನಸ್ಸು ಹಿಂಸಾ ಮೊದಲಾದ ಅಶುಭವಿಷಯಗಳಲ್ಲಿ ಉಪಯುಕ್ತವಾದರೆ ಅದಕ್ಕೆ ಅಶುಭೋಪಯೋಗವೆಂದೂ ಅಹಿಂಸಾದಿ ಶುಭವಿಷಯಗಳಲ್ಲಿ ಉಪಯುಕ್ತವಾದರೆ ಅದಕ್ಕೆ ಶುಭೋಪಯೋಗವೆಂದೂ ಶುದ್ಧವಸ್ತುವಿನಲ್ಲಿ ಉಪಯುಕ್ತವಾದರೆ ಅದಕ್ಕೆ ಶುದ್ಧೋಪಯೋಗವೆಂದೂ ಹೆಸರು. ಅಶುಭೋಪಯೋಗದಿಂದ ಪಾಪಕರ್ಮವೂ ಶುಭೋಪಯೋಗದಿಂದ ಪುಣ್ಯಕರ್ಮವೂ ಬಂಧವಾಗಿ ಅವುಗಳಿಂದ ಯಥಾಕ್ರಮವಾಗಿ ದುಃಖವೂ ಸಾಂಸಾರಿಕಸುಖವೂ ಉಂಟಾಗುತ್ತದೆ. ಶುದ್ಧೋಪಯೋಗದಿಂದ ಪಾಪಪುಣ್ಯಕರ್ಮಗಳ ವಿಮೋಚನೆಯಾಗಿ ಮುಕ್ತಿಯ ನಿತ್ಯಸುಖವುಂಟಾಗುವುದು. ಇದನ್ನು ಧ್ಯೇಯವನ್ನಾಗಿಟ್ಟುಕೊಂಡು ಇದಕ್ಕೆ ಸಹಕಾರಿಗಳಾದ ವ್ರತಗಳನ್ನು ಪಾಲಿಸಬೇಕೆಂದೂ ಅವ್ರತಗಳನ್ನು ತ್ಯಜಿಸಬೇಕೆಂದೂ ಮುಖ್ಯ ತಾತ್ಪರ್ಯವು ॥೩॥

**ಯತ್ರ ಭಾವಃ ಶಿವಂ ದತ್ತೇ ದ್ಯೌಃ ಕಿಯದ್ದೂರವರ್ತಿನೀ ॥**
**ಯೋ ನಯತ್ಯಾಶು ಗವ್ಯೂತಿಂ ಕ್ರೋಶಾರ್ಧೇ ಕಿಂ ಸ ಸೀದತಿ ॥೪॥**

ಭಾವಾರ್ಥ:- ಶುದ್ಧಾತ್ಮಗುಣಗಳಲ್ಲುಂಟಾಗುವ ಯಾವ ಭಾವವು ಮೋಕ್ಷವನ್ನು ಕೊಡುವುದೋ ಅದಕ್ಕೆ ಸ್ವರ್ಗವು ಎಷ್ಟು ದೂರದಲ್ಲಿರುವುದು ? ಯಾವ ಮನುಷ್ಯನು ಹೊರೆಯನ್ನು ಎರಡು ಹರದಾರಿಯವರೆಗೆ ಒಯ್ಯಬಲ್ಲನೋ ಅವನು ಅರೆ ಹರದಾರಿಯಲ್ಲಿ ಹೊತ್ತು ಆಯಾಸಪಡುತ್ತಾನೆಯೇ ?

ವಿವರಣ:- ಭವ್ಯಾತ್ಮನಿಗೆ ಆತ್ಮಧ್ಯಾನವನ್ನು ಮಾಡುವ ಶುದ್ಧೋಪಯೋಗಯೋಗ್ಯತೆಯು ಅವಿರತಸಮ್ಯಗ್ದೃಷ್ಟಿಯೆಂಬ ನಾಲ್ಕನೆಯ ಗುಣಸ್ಥಾನದಿಂದುಂಟಾಗುವುದು. ಚಾರಿತ್ರಮೋಹನೀಯಕರ್ಮದ-ಕಷಾಯೋದಯವು ಸೂಕ್ಷ್ಮಸಾಂಪರಾಯವೆಂಬ ಹತ್ತನೆಯ ಗುಣಸ್ಥಾನದವರೆಗಿರುವುದು. ಅಪ್ರಮತ್ತವೆಂಬ ಏಳನೆಯ ಗುಣಸ್ಥಾನದವರೆಗೆ ದೇವಗತಿ

ದೇವಾಯುಷ್ಯಗಳ ಬಂಧವಾಗಬಹುದು. ಶುದ್ಧಾತ್ಮಾದಿ ಶುದ್ಧವಸ್ತುಗಳನ್ನು ವಿಷಯೀಕರಿಸುವ ಶುದ್ಧಭಾವ–ಶುದ್ಧೋಪಯೋಗವು ಪಾಪಪುಣ್ಯಕರ್ಮಗಳನ್ನು ನಾಶ ಮಾಡಿ ಮುಕ್ತಿಯನ್ನು ಕೊಡಬಲ್ಲುದೆಂದು ಹೇಳಿದೆಯಷ್ಟೆ. ಆದರೆ ಆ ಭಾವವು ಎಲ್ಲಿಯವರೆಗೆ ಕಷಾಯ–ರಾಗಮಿಶ್ರವಾಗಿರುವುದೋ ಅಲ್ಲಿಯವರೆಗೆ ಮುಕ್ತಿಯನ್ನುಂಟುಮಾಡುವ ಶಕ್ತಿಯಿಲ್ಲದುದಾಗಿ ಉತ್ತಮವಾದ ದೇವಪದವಿಯನ್ನುಂಟುಮಾಡುವುದು. ಮುಕ್ತಿಯನ್ನು ಕೊಡಬಲ್ಲುದಾದ ಶುದ್ಧಭಾವವು ಸ್ವರ್ಗವನ್ನು ಕೊಡಲಾರದೇ ? ಕೊಟ್ಟೇ ಕೊಡುವುದು. ಎರಡು ಹರದಾರಿಯವರೆಗೆ ಹೊರೆಯನ್ನು ಹೊರಬಲ್ಲವನು ಅದನ್ನು ಅರೆ ಹರದಾರಿಯವರೆಗೆ ಹೊರಲಾರನೇ ?

ಅಹಿಂಸಾವ್ರತಾದಿ ಶುಭೋಪಯೋಗದಿಂದಲೇ ಸ್ವರ್ಗಪ್ರಾಪ್ತಿಯಾಗುವುದಲ್ಲದೆ ರಾಗಮಿಶ್ರವಾದ ಶುದ್ಧೋಪಯೋಗದಿಂದಲೂ ಆಗುವುದೆಂದೂ ಉತ್ತಮವ್ರತಾದಿಗಳನ್ನು ಪಾಲಿಸುವ ಶಕ್ತಿಯಿಲ್ಲದಿದ್ದರೂ ಉತ್ತಮವಾದ ದ್ರವ್ಯ ಕ್ಷೇತ್ರಾದಿಸಾಧನಗಳಿಲ್ಲದಿದ್ದರೂ ಅವುಗಳನ್ನೇ ಕಾದಿರದೆ ಆತ್ಮಸ್ವರೂಪ ಚಿಂತನೆಯ ಅಭ್ಯಾಸವನ್ನು ಮಾಡಲು ಪ್ರಯತ್ನಿಸಬೇಕೆಂದೂ ಮುಖ್ಯ ತಾತ್ಪರ್ಯವು ॥೪॥

**ಹೃಷೀಕಜಮನಾತಂಕಂ ದೀರ್ಘಕಾಲೋಪಲಾಲಿತಂ ॥**
**ನಾಕೇ ನಾಕೌಕಸಾಂ ಸೌಖ್ಯಂ ನಾಕೇ ನಾಕೌಕಸಾಮಿವ ॥೫॥**

ಭಾವಾರ್ಥ:– ಸ್ವರ್ಗದಲ್ಲಿ ಸ್ವರ್ಗಿಕ–ದೇವರ್ಕಳ ಸೌಖ್ಯವು ಇಂದ್ರಿಯಜನ್ಯವೂ ರೋಗಾದಿಗಳಿಲ್ಲದುದೂ ದೀರ್ಘಕಾಲದವರೆಗೆ ಅನುಭವಿಸಲ್ಪಡುವುದೂ ಸ್ವರ್ಗದಲ್ಲಿ ದೇವತೆಗಳ ಸುಖದಂತಿರುವುದೂ ಆಗಿದೆ.

ವಿವರಣ:– ಅಹಿಂಸಾವ್ರತಾದಿ ಶುಭೋಪಯೋಗದಿಂದಲಾಗಲಿ ರಾಗಮಿಶ್ರವಾದ ಶುದ್ಧೋಪಯೋಗದಿಂದಲಾಗಲಿ ಉಭಯದಿಂದಲಾಗಲಿ ಸ್ವರ್ಗವು ಪ್ರಾಪ್ತವಾಗುವುದೆಂದ ಮೇಲೆ ಆ ಸ್ವರ್ಗದ ವೈಶಿಷ್ಟ್ಯವೇನೆಂದು ಪ್ರಶ್ನೆಯುಂಟಾದರೆ ಅದಕ್ಕೆ ಉತ್ತರವಾಗಿ ಆಚಾರ್ಯರು ಹೇಳುವ ಮಾತಿದು- ಸ್ವರ್ಗಿಕ–ದೇವತೆಗಳಿಗುಂಟಾಗುವ ಸುಖಕ್ಕೆ ಸಮಾನವಾದ ಸುಖವು ಸಂಸಾರಿ ಜೀವಗಳಲ್ಲಿ ಮತ್ತಾರಿಗೂ ಉಂಟಾಗುವುದಿಲ್ಲವಾದುದರಿಂದ ಅದಕ್ಕೆ ಆ



ದೇವತೆಗಳ ಸುಖವನ್ನೇ ಹೋಲಿಸಬೇಕಾಗುವುದು. ಆ ಸುಖವು ಆಯಾ ಇಂದ್ರಿಯಗಳಿಂದುಂಟಾಗುವುದು. ಆದರೆ ಅದು ಇತರ ಸಂಸಾರಿಜೀವಗಳ ಇಂದ್ರಿಯವಿಷಯಸುಖದಂತೆ ರೋಗಾದಿಗಳಿಂದ ಪ್ರತಿಘಾತಿತವಾದುದಲ್ಲ. ದೇವತೆಗಳಿಗೆ ರೋಗಾದ್ಯುಪದ್ರವಗಳಿಲ್ಲದಿರುವುದರಿಂದ ಅವರ ಆ ಸುಖವು ನಿರಾತಂಕವಾಗಿದೆ. ಮತ್ತು ಬಹುದೀರ್ಘವಾದ ಸಾಗರೋಪಮಕಾಲದವರೆಗೆ ಅನುಭವಿಸಲ್ಪಡತಕ್ಕುದಾಗಿದೆ ॥೫॥

**ವಾಸನಾಮಾತ್ರಮೇವೈತತ್ಸುಖಂ ದುಃಖಂ ಚ ದೇಹಿನಾಂ॥**
**ತಥಾಹ್ಯುದ್ವೇಜಯಂತ್ಯೇತೇ ಭೋಗಾ ರೋಗಾ ಇವಾಪದಿ ॥೬॥**

ಭಾವಾರ್ಥ:– ದೇಹಧಾರಿಗಳಿಗೆ ಈ ಸುಖವೂ ದುಃಖವೂ ವಾಸನಾಮಾತ್ರವಾಗಿದೆ. ಹಾಗೆಯೇ ಸರಿ–ಆಪತ್ಕಾಲದಲ್ಲಿ ಈ ಭೋಗಗಳು, ರೋಗಗಳಂತೆ, ಮನೋವ್ಯಥೆಯನ್ನುಂಟುಮಾಡುತ್ತವೆ.

ವಿವರಣ:– ಕೆಂಪು ಕಪ್ಪು ಬಣ್ಣದ ಕಾಗದದ ಸಂಬಂಧದಿಂದ ಸ್ಫಟಿಕದ ಪ್ರತಿಮೆಯು ಕೆಂಪಾಗಿಯೂ ಕಪ್ಪಾಗಿಯೂ ಕಂಡರೂ ವಸ್ತುತಃ ಅದು ಕೆಂಪಾಗಿಯೂ ಕಪ್ಪಾಗಿಯೂ ಇಲ್ಲ. ಅದರಂತೆ ನಿಶ್ಚಯನಯದಿಂದ ಆತ್ಮನಿಗೂ ಇಷ್ಟಾನಿಷ್ಟಭೋಗೋಪಭೋಗವಸ್ತುಜನ್ಯವಾದ ಸುಖದುಃಖಗಳಿಗೂ ಸಂಬಂಧವಿಲ್ಲ. ಆದರೂ ದೇಹವೇ ಆತ್ಮನೆಂದು ತಿಳಿಯುವ ಬಹಿರಾತ್ಮನಿಗೆ "ಇಷ್ಟವಸ್ತುಸಂಬಂಧದಿಂದ ನಾನು ಸುಖಿಯಾಗಿದ್ದೇನೆ ; ಅನಿಷ್ಟವಸ್ತುಸಂಬಂಧದಿಂದ ನಾನು ದುಃಖಿಯಾಗಿದ್ದೇನೆ" ಎಂಬ ಭ್ರಮಮೂಲಕವಾದ ವಾಸನಾಸಂಸ್ಕಾರದಿಂದ ಸುಖದುಃಖಕಲ್ಪನೆಯುಂಟಾಗುವುದು. ಭೋಗವಸ್ತುಗಳು ನಿಜವಾಗಿಯೂ ಸುಖವನ್ನುಂಟುಮಾಡುವುವಾಗಿದ್ದರೆ ಆಪತ್ಕಾಲದಲ್ಲಿ ಮನೋವ್ಯಥೆಯನ್ನುಂಟುಮಾಡುತ್ತಿರಲಿಲ್ಲ. ಹಾಗಿಲ್ಲದೆ ಇವು ಆಪತ್ಕಾಲದಲ್ಲಿ, ರೋಗಗಳಂತೆ, ಮನೋವ್ಯಥೆಯನ್ನುಂಟುಮಾಡುತ್ತವೆ. ತಾನು ಅವುಗಳನ್ನು ಬಿಟ್ಟು ಹೋಗುವಾಗಲೂ ಅವು ದುಃಖವನ್ನುಂಟುಮಾಡುತ್ತವೆ. ದೀರ್ಘಕಾಲದ ಆ ಸ್ವರ್ಗಸುಖವೂ ಆ ದಿವ್ಯಭೋಗಸಾಮಗ್ರಿಗಳೂ ತೊಲಗುವುವು. ತಾವರೆಯು ನೀರಿನಲ್ಲಿದ್ದರೂ ಅದು ನೀರನ್ನು ಮುಟ್ಟದೆ ಮೇಲಿರುವಂತೆ ಆತ್ಮನು ದೇಹದಲ್ಲಿದ್ದರೂ ನಿಶ್ಚಯ

ನಯದಿಂದ ಆತ್ಮನಿಗೂ ದೇಹಾದಿ ಪರವಸ್ತುಗಳಿಗೂ ತನ್ಮೂಲಕವಾದ ಸುಖದುಃಖಗಳಿಗೂ ಸಂಬಂಧವಿಲ್ಲವೆಂದೂ ಆತ್ಮನ ನಿಜವಾದ ಸುಖಗುಣವೇ ಸ್ವಾಧೀನವಾಗಿರತಕ್ಕದೆಂದೂ ಮುಖ್ಯತಾತ್ಪರ್ಯವು ॥೬॥

**ಮೋಹೇನ ಸಂವೃತಂ ಜ್ಞಾನಂ ಸ್ವಭಾವಂ ಲಭತೇ ನ ಹಿ ॥**
**ಮತ್ತಃ ಪುಮಾನ್ ಪದಾರ್ಥಾನಾಂ ಯಥಾ ಮದನಕೋದ್ರವೈಃ॥**

**ಭಾವಾರ್ಥ:-** ಬುದ್ಧಿಭ್ರಮೆಯನ್ನುಂಟುಮಾಡುವ ಹಾರಕಧಾನ್ಯಗಳಿಂದ ಮತ್ತನಾದ ಮನುಷ್ಯನು ಪದಾರ್ಥಗಳ ಸ್ವಭಾವವನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆ ಮೋಹನೀಯಕರ್ಮದಿಂದ ಮುಚ್ಚಲ್ಪಟ್ಟಿರುವ ಜ್ಞಾನವು ಪದಾರ್ಥಗಳ ಸ್ವಭಾವವನ್ನು ತಿಳಿಯುವುದೇ ಇಲ್ಲ.

**ವಿವರಣ:–** ಮದ್ಯಪಾನವನ್ನು ಮಾಡಿ ಮತ್ತನಾದ ಮನುಷ್ಯನು ಸ್ವಪರಪದಾರ್ಥಪರಿಜ್ಞಾನವಿಲ್ಲದೆ ತಾಯಿಯನ್ನು ಹೆಂಡತಿಯನ್ನಾಗಿಯೂ ಹೆಂಡತಿಯನ್ನು ತಾಯಿಯನ್ನಾಗಿಯೂ ತಿಳಿದು ಸಂಭಾಷಿಸುವುದೂ ಹಿಂಸಾದಿ ದುಷ್ಕಾರ್ಯಗಳನ್ನು ಮಾಡುವುದೂ ಮನಸ್ವಿಯಾಗಿ ಮಾತನಾಡುವುದೂ ಉಂಟಷ್ಟೇ. ಹಾಗೆ ಮಿಥ್ಯಾತ್ವವೆಂಬ ದರ್ಶನಮೋಹನೀಯಕರ್ಮದಿಂದ ಮುಚ್ಚಲ್ಪಟ್ಟಿರುವ ಜ್ಞಾನವು ಪದಾರ್ಥಗಳ ಯಥಾರ್ಥಸ್ವರೂಪವನ್ನು ತಿಳಿಯುವುದಿಲ್ಲ. ಅದು ಸಂಯೋಗದಲ್ಲಿಯೂ ವಿಯೋಗದಲ್ಲಿಯೂ ದುಃಖದಾಯಕವೂ ಸ್ವರೂಪ ಲಕ್ಷಣಗಳಿಂದ ಭಿನ್ನವೂ ಜಡವೂ ಆದ ದೇಹಾದಿ ಪರಪದಾರ್ಥಗಳನ್ನು ತಾನೆಂದು ತಿಳಿಯುತ್ತದೆ. ಆತ್ಮನು ಸುಖಸ್ವರೂಪಿಯೂ ಅಮೂರ್ತನೂ ಚೇತನಾಲಕ್ಷಣವುಳ್ಳವನೂ ಆಗಿದ್ದಾನೆಂದು ತಿಳಿಯುವುದಿಲ್ಲ. ಈ ವಿಪರೀತ-ಮಿಥ್ಯಾಜ್ಞಾನದಿಂದ ಆತ್ಮನು ಭವಪರಂಪರೆಯಲ್ಲಿ ತಿರುಗುತ್ತಿರುತ್ತಾನೆಂದು ಭಾವವು ॥೭॥

**ವಪುರ್ಗೃಹಂ ಧನಂ ದಾರಾಃ ಪುತ್ರಾ ಮಿತ್ರಾಣಿ ಶತ್ರವಃ ॥**
**ಸರ್ವಥಾನ್ಯಸ್ವಭಾವಾನಿ ಮೂಢಃ ಸ್ವಾನಿ ಪ್ರಪದ್ಯತೇ ॥೮॥**

**ಭಾವಾರ್ಥ:–** ಶರೀರ, ಗೃಹ, ಧನ, ಪತ್ನಿ, ಪುತ್ರ, ಮಿತ್ರ, ಶತ್ರು ಈ ವಸ್ತುಗಳು ಆತ್ಮನಿಂದ ಸಂಪೂರ್ಣವಾಗಿ ಭಿನ್ನಸ್ವಭಾವವುಳ್ಳವಾಗಿರುತ್ತವೆ. ಅಜ್ಞಾನಿ-ಮೂರ್ಖನು ಅವುಗಳನ್ನು ಆತ್ಮೀಯವಸ್ತುಗಳನ್ನಾಗಿ ತಿಳಿಯುತ್ತಾನೆ.



**ವಿವರಣ :–** ಅಜ್ಞಾನಿಯು ಅನಾತ್ಮೀಯವಸ್ತುಗಳನ್ನು ಆತ್ಮೀಯವಸ್ತುಗಳನ್ನಾಗಿ ಯಾವುಗಳನ್ನು ತಿಳಿಯುತ್ತಾನೆಂಬುದಕ್ಕೆ ಉದಾಹರಣವಾಗಿ ಈ ಪದ್ಯದಲ್ಲಿ ದೇಹ ಮೊದಲಾದ ಕೆಲವು ವಸ್ತುಗಳನ್ನು ಉಲ್ಲೇಖಿಸಿದ್ದಾರೆ. ಮಿಥ್ಯಾಜ್ಞಾನದಿಂದ ಪ್ರಭಾವಿತನಾದ ಆತ್ಮನು ದೇಹಾದಿ ಪರಪದಾರ್ಥಗಳು ತನ್ನವೆಂದು ತಿಳಿದು ಅವುಗಳ ವಿಯೋಗದಲ್ಲಿ ದುಃಖವನ್ನು ಹೊಂದುತ್ತಾನೆ. ಬೇರೆಯವರ ದೇಹಾದಿವಸ್ತುಗಳು ಹೇಗೆ ಪರವಸ್ತುಗಳೋ ಹಾಗೆಯೇ ತನ್ನವೆಂದು ಭಾವಿಸಲ್ಪಟ್ಟಿರುವ ಆ ವಸ್ತುಗಳೂ ಪರವಸ್ತುಗಳಾಗಿರುತ್ತವೆ. ತನ್ನ ಸ್ವರೂಪಲಕ್ಷಣಗಳೇ ಬೇರೆ, ಆ ವಸ್ತುಗಳ ಸ್ವರೂಪಲಕ್ಷಣಗಳೇ ಬೇರೆ. ಆದರೂ ಅನಾದಿವಾಸನಾ-ಸಂಸ್ಕಾರದಿಂದ ಮೂಢಾತ್ಮನು ತನ್ನನ್ನು ತಾನು ಮರೆತು ಆ ಪರಪದಾರ್ಥಗಳು ತನ್ನವೆಂದು ತಿಳಿಯುತ್ತಾನೆ. ಆದರಿಂದ ಭವದುಃಖಭೋಗಿಯಾಗುತ್ತಾನೆ. ಬೇರೆಯವರ ವಸ್ತುವನ್ನು ತನ್ನದೆಂದು ಸ್ವೀಕರಿಸುವವನು ಅಪರಾಧಿಯಾಗುತ್ತಾನೆಂಬುದೂ ಶಿಕ್ಷೆಗೊಳಗಾಗಿ ಕಷ್ಟಪಡುತ್ತಾನೆಂಬುದೂ ಲೋಕವ್ಯವಹಾರದಿಂದಲೂ ಸ್ಪಷ್ಟವಾಗುವುದು ॥೮॥

**ದಿಗ್ದೇಶೇಭ್ಯಃ ಖಗಾ ಏತ್ಯ ಸಂವಸಂತಿ ನಗೇ ನಗೇ ॥**
**ಸ್ವಸ್ವಕಾರ್ಯವಶಾದ್ಯಾಂತಿ ದೇಶೇ ದಿಕ್ಷು ಪ್ರಗೇ ಪ್ರಗೇ ॥೯॥**

**ಭಾವಾರ್ಥ:–** ಸಾಯಂಕಾಲದಲ್ಲಿ ಪಕ್ಷಿಗಳು ಪೂರ್ವಾದಿ ದಿಕ್ಕುಗಳಿಂದಲೂ ಅಂಗ ವಂಗ ಕಲಿಂಗಾದಿ ದೇಶಗಳಿಂದಲೂ ಬಂದು ಮರಗಳಲ್ಲಿ ವಾಸಮಾಡುತ್ತವೆ. ಪ್ರತಿದಿನ ಪ್ರಾತಃಕಾಲದಲ್ಲಿ ತಂತಮ್ಮ ಕಾರ್ಯವಶದಿಂದ ಬೇರೆ ಬೇರೆ ದಿಕ್ಕುಗಳಿಗೂ ದೇಶಗಳಿಗೂ ಹೋಗುತ್ತವೆ.

**ವಿವರಣ:–** ಪುತ್ರ ಮಿತ್ರ ಕಳತ್ರಾದಿಗಳ ಸಂಬಂಧವು ಯಾವ ರೀತಿಯಾಗಿರುವುದೆಂಬುದನ್ನು ತೋರಿಸುವುದಕ್ಕಾಗಿ ಈ ಪದ್ಯದಲ್ಲಿ ಒಂದು ದೃಷ್ಟಾಂತವನ್ನು ಕೊಟ್ಟಿದ್ದಾರೆ–ಪ್ರತಿದಿನ ಸಾಯಂಕಾಲದಲ್ಲಿ ಪಕ್ಷಿಗಳು ಬೇರೆ ಬೇರೆ ದಿಕ್ಕುಗಳಿಂದಲೂ ದೇಶಗಳಿಂದಲೂ ಬಂದು ರಾತ್ರಿಕಾಲದಲ್ಲಿ